International Journal of Kannada Research
www.kannadajournal.com

**ISSN: 2454–5813**
IJKR 2018; 4(1): 74-75
© 2018 IJKR
www.kannadajournal.com
Received: 14-11-2017
Accepted: 15-12-2017

**Dr. Gemsing Rathod**
Kannada Department,
Gulbarga University Kalaburagi,
Karnataka, India

**Correspondence**
**Dr. Gemsing Rathod**
Kannada Department,
Gulbarga University Kalaburagi,
Karnataka,India

# ಆಧುನಿಕ ವಚನ ಸಾಹಿತ್ಯ

**Dr. Gemsing Rathod**

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ೧೨ನೇ ಶತಮಾನ ಕ್ರಾಂತಿಯ ಯುಗವಾಗಿ ಕಂಡುಬರುತ್ತದೆ. ಬಸವ ಪೂರ್ವಯುಗದ ಸಂದರ್ಭದಲ್ಲಿ ಸಮಾಜದಲ್ಲಿನ ಪರಿಸರ, ವಾತಾವರಣ ಹಿತಕರವಾಗರಿಲಿಲ್ಲ. ರಾಜಕೀಯ ಅಸ್ತಿರತೆ, ಧಾರ್ಮಿಕ ಗೊಂದಲ, ಅಂಧವಿಶ್ವಾಸ, ಮೂಢನಂಬಿಕೆ, ಅಂಧಾನುಕರಣೆ, ಗೊಡ್ಡು ಸಂಪ್ರದಾಯಗಳ ಆಚರಣೆ, ಸಾಮಾಜಿಕ ಅಸಮಾನತೆಯ ಅಟ್ಟಹಾಸಕ್ಕೆ ಮಿತಿಯಿರಿಲಿಲ್ಲ. ಕೆಲವೇ ಜನ ಪುರೋಹಿತ ವರ್ಗದ ಪ್ರಾಬಲ್ಯ ಅಧಿಕವಾಗಿತ್ತು. ಜಾತಿ–ವರ್ಗಗಳ ಜಂಜಾಟ, ಸಾಮಾನ್ಯ ವರ್ಗದವರು ಅಂತ್ಯಜರು, ಬಾಯಿ ಇದ್ದು ಮೂಕರಾಗಿದ್ದರು. ದೀನ ದಲಿತರ, ಕೆಳವರ್ಗದವರ ಶೋಷಣೆ, ಅಶಾಂತಿ, ಅತೃಪ್ತಿ, ಅನ್ಯಾಯ, ಅಕ್ರಮಗಳು, ಅನೈತಿಕ ಆಚರಣೆಗಳಿಂದ ಜನಸಾಮಾನ್ಯರ ಸ್ಥಿತಿ ಚಿಂತಾಜನಕವಾಗಿತ್ತು. ಅವರ ಜೀವದ ದನಿ, ಆಸೆ, ಅಭಿಲಾಷೆ, ಹುದುಗಿದ ಭಾವನೆಗಳನ್ನು ಹೊರ ಹಾಕಲು ಸ್ವಾತಂತ್ರ್ಯ ವಿದಹಂತಹ ದುಸ್ತರ ಪರಿಸ್ಥಿತಿಯಲ್ಲಿದ್ದರು. ಪ್ರಭುತ್ವ ಜನಸಾಮಾನ್ಯರ ದನಿ ಕೇಳಿಸಿಕೊಳ್ಳದೇ ಮೂಕವಾಗಿತ್ತು. ಅಂದಿನ ಕೆಳವರ್ಗದವರು ಸಾಹಿತ್ಯ ಕ್ಷೇತ್ರದಲ್ಲಿ ಪಾಲ್ಗೊಂಡು ತಮ್ಮಲ್ಲಿ ಹುದುಗಿರುವಂತಹ ಪ್ರತಿಭೆಯನ್ನು ಹೊರ ಹಾಕಬೇಕೆಂದರೆ ಅಂದಿನ ಚಂಪೂ ಸಾಹಿತ್ಯ ಅವರನ್ನು ತನ್ನಿಂದ ದೂರವಿರಿಸಿ ಕುರುಡರನ್ನಾಗಿಸಿ ಶ್ರೀಸಾಮಾನ್ಯರ ಬಾಳು ಗೋಳಿನ ಕಥೆಯಾಗಿಸಿತ್ತು. ಈ ದಾರುಣ ವ್ಯವಸ್ಥೆಯ ನಿರ್ಮೂಲನೆಗೆ ಒಂದು ವೇದಿಕೆ, ಮುಕ್ತ ಸಮಾಜದ ಆ ಕಾಲದ ಕರೆಗಾಗಿ ಸಾಮಾನ್ಯ ವರ್ಗದ ದಾರಿ ಕಾಯುತ್ತಿರುವಾಗ, ಭುವನದ ಭಾಗ್ಯ ಬಂದಂತೆ ಬಂದ ಬಸವಾದಿ ಶರಣರು, ವಚನಕಾರರು, ತಮ್ಮ ವಚನವೆಂಬ ಮಾಧ್ಯಮದ ಮುಖಾಂತರ ಅಂದಿನ ದಾರುಣ ಸ್ಥಿತಿಯಲ್ಲಿನ ಅನ್ಯಾಯ, ಅಧರ್ಮ, ಅನೀತಿ, ದೌರ್ಜನ್ಯದ ವಿರುದ್ಧ ದನಿಯೆತ್ತಿದರು. ಪುರೋಹಿತಶಾಹಿಯ ವಿರುದ್ಧ ಪ್ರಥಮವಾಗಿ ಬಂಡೆದ್ದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ಪ್ರಾರಂಭದಲ್ಲಿ ವಚನಕಾರರು ತಮ್ಮ ಮನದಾಳದಲ್ಲಿಯೇ ಕುದಿಯುತ್ತಿದ್ದ ಲಾವರಸವನ್ನು ಹೊರ ಹಾಕಲು ಸೂಕ್ತ ಸಂದರ್ಭಕ್ಕಾಗಿ ಕಾಯುತ್ತಿದ್ದರು. ಆ ಸೂಕ್ತ ಸಮಯಕ್ಕಾಗಿ ಕಾದು ಬೇಸತ್ತ ಕೆಳವರ್ಗದ ಜನರು ಬಡಬಾಗ್ನಿಯಂತೆ ತಮ್ಮ ವಿಚಾರಗಳನ್ನು ಕಾಳ್ಗಿಚ್ಚಿನಂತೆ ಹೊರ ಹಾಕಿದರು. ತಮ್ಮದೇ ಆದಂತಹ ಸರಳವಾದ ಭಾಷೆಯಲ್ಲಿ ನೇರವಾದ ಆಡು ನುಡಿಯಲ್ಲಿಯೇ ತುಳಿತಕ್ಕೊಳಗಾದ ಜನರ ಭಾವನೆಗಳಿಗೆ ಸ್ಪಂದಿಸಿ ಸಾವಿರ ಕಣ್ಣುಗಳಿಗೆ ಹೊಸ ಲೋಕವನ್ನು ಸೃಷ್ಟಿಸಿದರು. ಅಂದಿನ ಪರಿಸರದ ಒತ್ತಡದಿಂದಾಗಿ ಉದಯವಾದ ವಚನ ಸಾಹಿತ್ಯ ಇಂದಿನ ಆಧುನಿಕ ಯುಗದಲ್ಲಿ ಸಮೃದ್ಧಿಯಿಂದ ಶ್ರೀಮಂತಿಕೆಯಿಂದ ಮುನ್ನುಗ್ಗುತ್ತಿದೆ. ಕ್ರಾಂತಿಕಾರಕ ವಿಚಾರಗಳ, ಮುಕ್ತಿ ಪ್ರಾಪ್ತಿಗಾಗಿ ಶೋಷಣೆಯ ವಿರುದ್ಧದ ದನಿಯಾಗಿ ಬೃಹತ್ ಪ್ರಮಾಣದಲ್ಲಿ ವಚನ ಸಾಹಿತ್ಯ ಸೃಷ್ಟಿಯಾಯಿತು.

ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದ ವಚನವಾಹಿನಿ ೧೨ನೇ ಶತಮಾನದಿಂದ ಇಂದಿನ ಆಧುನಿಕ ಯುಗದವರೆಗೂ ಬತ್ತಿ ಹೋಗದೆ ಜೀವಂತಿಕೆಯಿಂದ ನಳನಳಿಸುತ್ತಿದೆ, ಬೆಳೆಯುತ್ತಿದೆ. ಇಂತಹ ಶ್ರೀಮಂತವಾದ ವಚನ ಸಾಹಿತ್ಯದ ಬೆಳವಣಿಗೆಯನ್ನು ನಾಲ್ಕು ಯುಗಗಳಲ್ಲಿ ವಿಂಗಡಿಸಬಹುದು. ಮೊದಲನೆಯದು ಬಸವಪೂರ್ವ ಯುಗ, ಎರಡನೆಯದು ಬಸವಯುಗ, ಮೂರನೆಯದ ಬಸವೋಅತ್ತರ ಯುಗ ಮತ್ತು ನಾಲ್ಕನೆದಾಗಿ ಆಧುನಿಕ ಯುಗ. ವಚನ ಸಾಹಿತ್ಯದ ಬೆಳವಣಿಗೆಯನ್ನು ಗಮನಿಸಿದಾಗ ಇಂದಿನ ಆಧುನಿಕ ಯಯಗದಲ್ಲಿ ಬಹಳ ಸಮೃದ್ಧಿಯಿಂದ ವೈವಿಧ್ಯತೆಯಿಮದ ಬೆಳೆಯುತ್ತಿದೆ. ಈ ಆಧುನಿಕ ವಚನಕಾರರು ಇಂದಿನ ಸಾಂಪ್ರದಾಯಿಕ ವಚನದ ಮಾದರಿಯನ್ನೇ ಮುಂದುವರೆಸಿಕೊಂಡು ಬರುತ್ತಿದ್ದರೂ ಸಹ ಇವರ ವಚನಗಳಲ್ಲಿ ಕಂಡು ಬರುವ ವಿಚಾರಗಳಿಗೂ, ವೈವಿಧ್ಯತೆಗೂ ಬಹಳ ವಿಶಿಷ್ಟವಾದ ಸ್ಥಾನವಿದೆ. ೧೨ನೇ ಶತಮಾನದ ವಚನಕಾರರಿಗೂ ಆಧುನಿಕ ವಚನಕಾರರ ಅಭಿವ್ಯಕ್ತಿ ಹಾಗೂ ಉದ್ದೇಶಗಳಲ್ಲಿ ಸಾಮ್ಯ–ವ್ಯತ್ಯಾಸಗಳನ್ನು ನೋಡಬಹುದಾಗಿದೆ.

ಅಂದಿನ ವಚನಕಾರರು ಅನುಭಾವದಿಂದ ವಚನಗಳನ್ನು ರಚಿಸುತ್ತಿದ್ದಾರೆ. ಇಪ್ಪತ್ತನೆಯ ಶತಮಾನದ ವಚನ ರಚನೆಯ ವ್ಯಾಪ್ತಿ ತುಂಬಾ ವಿಶಾಲ ಹಾಘೂ ವಿಸ್ಥಾರವನ್ನು ಹೊಂದಿದೆ. ಇಂದು ಸುಮಾರು ೫೦೦ಕ್ಕೂ ಹೆಚ್ಚು ಜನ ವಚನಕಾರರು ಸಮಾರು ಮೂವತ್ತು ಸಾವಿರಕ್ಕಿಂತಲೂ ಅಧಿಕ ವಚನಗಳನ್ನು ರಚಿಸಿದ್ದಾರೆ. ಹಲವಾರು ಮಹಿಳಾ ವಚನಕಾರ್ತಿಯರು ಇಲ್ಲಿದ್ದಾರೆ.

ಹೊಸಗನ್ನಡದ ನವ್ರೋದಯ ಸಂದರ್ಭದಿಂದ ಮೊದಲ್ಗೊಂಡು ಇಂದಿನ ತೀರ ಇತ್ತೀಚಿನವರೆಗೆ ರಚನೆಗೊಂಡ, ರಚನೆಯಾಗುತ್ತಿರುವ ವಚನಗಳನ್ನು ಆಧುನಿಕ ವಚನಗಳೆಂದು ಕರೆಯಬಹುದು. ಕನ್ನಡ ಸಾಹಿತ್ಯದ ಪ್ರಮುಖ ಘಟ್ಟವಾದ ನವ್ರೋದಯದೊಂದಿಗೆ ಆಧುನಿಕ ವಚನ ಪರಂಪರೆಯೂ ಆರಂಭವಾಯಿತು. ಆಧುನಿಕ ಸಾಹಿತ್ಯವನ್ನು ಮೊದಲು ಪ್ರಾರಂಭಿಸಿದವರಲ್ಲಿ ಬೇಂದ್ರೆಯವರು. ಇವರು ೧೯೨೦-೨೧ರಲ್ಲಿ ನೋವಿನ ನೆಲೆ-ಹಿಗ್ಗಿನ ಬೆಲೆ' ಎಂಬ ವಚನಗಳನ್ನು ಮೊದಲು ಬರೆದರು. ೧೯೩೨ರಲ್ಲಿ ಪ್ರಕಟವಾದರೆ, ನಂತರ ಎಸ್.ವಿ.ರಂಗಣ್ಣನವರ ರಂಗಯ್ಯನ ವಚನಗಳುಇ ಎಂಬ ಶಿರೋನಾಮೆಯಲ್ಲಿ ೧೫ ವಚನಗಳು ಬರಹಗಾರನ ಹೆಸರಿಲ್ಲದೆ ಪ್ರಕಟವಾದವು.

ಹೀಗೆ ಹಲವಾರು ಕವಿಗಳು ವಚನಗಳನ್ನು ರಚಿಸಿದ್ದಾರೆ. ಆದರೆ ಆಧುನಿಕ ವಚನ ಸಾಹಿತ್ಯ ವ್ಯವಸ್ಥಿತವಾಗಿ ಯಾರು ಪ್ರಾರಂಭಿಸಿದರು ಎಂಬ ಬಗ್ಗೆ ಪ್ರಶ್ನೆ ಉದ್ಭವಿಸುವುದು ಸಹಜ. ಬೇಂದ್ರೆ, ಕುವೆಂಪು, ದಿವಾಕರರು ವಚನ ಪ್ರಕಾರದಲ್ಲಿ ಕೆಲವು ವಚನಗಳನ್ನು ಬರೆದರೂ ಸಹ ಅವರು ಅವುಗಳಿಗೆ ಅವರೇ ಸ್ವತಃ ವಚನಗಳೆಂದು ಒಪ್ಪಿಕೊಂಡಂತೆ ಕಂಡುಬರುವುದಿಲ್ಲ. ಹೀಗಾಗಿ ಹರ್ಡೇಕರ್ ಮಂಜಪ್ಪನವರೇ ಆದುನಿಕ ವಚನ ಸಾಹಿತ್ಯದ ಆದ್ಯ ವಚನಕಾರರಾಗಿ ತಿಳಿದುಬರುತ್ತದೆ. ಇವರ ನಂತರ ಸಿದ್ಧಯ್ಯ ಪುರಾಣಿಕರು, ಎಸ್.ವಿ.ರಂಗಣ್ಣ, ಎಸ್.ವಿ.ಪರಮೇಶ್ವರ ಭಟ್ಟ, ಜ.ಚ.ನಿ., ಮಹಾದೇವ ಬಣಕಾರ, ಕಮಲಾ ಹಂಪನಾ ಮುಂತಾದವರು ಆಧುನಿಕ ವಚನಗಳನ್ನು ರಚಿಸಿದ್ದಾರೆ ಎಮದು ತಿಳಿದು ಬರುತ್ತದೆ. ಹಾಗೆಯೇ ಗುಲಬರ್ಗಾ ಭಾಗದಲ್ಲಿರುವ ಪ್ರಮುಖ ಆಧುನಿಕ ವಚನಕಾರರಾಗಿ, ವಾಗ್ದೇವಿ ಪಾಟೀಲ, ಡಾ.ಶರಣಬಸಪ್ಪ ಅಪ್ಪ, ಡಾ.ಚೆನ್ನಣ್ಣ ವಾಲೀಕಾರ, ಡಾ.ಜಯಶ್ರೀ ದಂಡೆ, ಶ್ರೀ ಹಣಮಂತರಾವ ಮೋತಕಪಳ್ಳಿ, ಶ್ರೀ ಗುರುಲಿಂಗಪ್ಪ ಹಾಲಳ್ಳಿ, ಡಾ.ಸರಸ್ವತಿ ಚಿಮ್ಮಲಗಿ, ಶೈಲಜಾ ಉಡಚಣ, ಡಾ.ಎಸ್.ಎಸ್.ಪಾಟೀಲ, ಪ್ರಬು ಖಾನಾಪುರೆ ಮುಂತಾದವರ ಸಾಲಿನಲ್ಲಿ ಸಿದ್ಧರಾಮ ಪೋಲೀಸ್ ಪಾಟೀಲರು ಒಬ್ಬರು. ಸಿದ್ಧರಾಮ ಪೋಲೀಸ್ ಪಾಟೀಲರು ಆಧುನಿಕ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. 'ಸತ್ಯಜ್ಞನ ವಚನಗಳು' ಎಂಬ ಶೀರ್ಷಿಕೆಯಲ್ಲಿ ಪಾಟೀಲರು ಹಲವಾರು ವಚನಗಳನ್ನು ರಚಿಸಿದ್ದಾರೆ. ಇವರ ಮೇಲೆ ಸರ್ವಜ್ಞ ಕವಿಯ ಪ್ರಭಾವ ಹೆಚ್ಚಾದಂತೆ ಕಂಡುಬರುತ್ತದೆ. ಅದಕ್ಕಾಗಿಯೇ ಅವರು ಸರ್ವಜ್ಞನಂತೆಯೇ ಅದೇ ಶೈಲಿಯ ತ್ರಿಪದಿಗಳಿಗೆ 'ಸತ್ಯಜ್ಞ' ಎಂಬ ಅಂಕಿತವಿಟ್ಟದ್ದು ನೋಡಿದರೆ ಪಾಟೀಲರ ಮೇಲೆ ಸರ್ವಜ್ಞನ ಪ್ರಭಾವ ಮತ್ತು ಪ್ರೇರಣೆಯಾದ ಬಗ್ಗೆ ತಿಳಿಯಬಹುದಾಗಿದೆ. ಸರ್ವಜ್ಞ ಮೂರ್ತಿಯಂತೆಯೇ ಇವರು ಸಮಾಜದಲ್ಲಿಯ ಅನುಭವವುಂಡು ಅಲ್ಲಿ ನಡೆಯುವ ಜೀವನ ವ್ಯಾಪಾರದ ಬಗೆ ತಮ್ಮ ತ್ರಿಪದಿಗಳಲ್ಲಿ ಬಹು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಸಮಾಜದಲ್ಲಿಯ ಓರೆ ಕೋರೆಗಳು, ಡಂಭಾಚಾರಗಳ ಬಗ್ಗೆ ಸೂಕ್ಷ್ಮ ಸಂವೇದನೆಯಿಂದ ಮೊನಚಾಗಿ ಚುಚ್ಚಿ ತಿದ್ದಲು ಪ್ರಯತ್ನಿಸಿದ್ದಾರೆ. ತಮ್ಮ ಕಣ್ಣಿಗೆ ಕಂಡ ಸತ್ಯವನ್ನು ನಿತ್ಯ ಜೀವನದಲ್ಲಿ ನಡೆಯುವ ಮೋಸ-ವಂಚನೆಗಳ ಬಗೆಗೆ ನೇರವಾಗಿ ಖಂಡಿಸುವ ಇವರ ಗಂಭೀರತೆ, ನಿಷ್ಠುರತೆ ಮೆಚ್ಚುವಂಥದ್ದು.

ಇವರ ತ್ರಿಪದಿಗಳ ಬಗ್ಗೆ ಡಾ.ಸಿದ್ಧಯ್ಯ ಪುರಾಣಿಕರು 'ಸತ್ಯಜ್ಞನ ವಚನಗಳು' ಭಾಗ ೧ರ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ. 'ತೆರೆದ ಕಣ್ಣುಗಳಿಮದ ಸುತ್ತಮುತ್ತಲೂ ದಿನ ರಾತ್ರಿಯೆನ್ನದೆ ಸಮಾಜದಲ್ಲಿ ನಡೆಯುತ್ತಿರುವುದನ್ನು ನೋಡುತ್ತ ನಡೆದಿರುವ ಶ್ರೀ ಸಿದ್ಧರಾಮರಿಗೆ ಬೆಳಕು ಕಂಡಂತೆ 'ಠೀವಿ ಶಬ್ದವ ಬಿಟ್ಟು ಭಾವಕ್ಕೆ ಬೆಲೆ ಕೊಟ್ಟಿದ್ದಾರೆ. ಲೋಕ ಮಿಡಿದಂತೆ ನುಡಿದ ಇವರ ಹೃದಯ ವೀಣೆಯು ಹೊಮ್ಮಿಸಿದ ಇಂಚರಗಳಾಗಿ ಈ ತ್ರಿಪದಿಗಳು ಮೈದಾಳಿವೆ ಎಂದು ಸಿದ್ಧಯ್ಯ ಪುರಾಣಿಕರು ಹೇಳಿದ್ದಾರೆ.

ಇವರ ತ್ರಿಪದಿಗಳು ತುಂಬಾ ಸರಳ ಶೈಲಿಯಿಂದ ಮಾರ್ಮಿಕವಾಗಿ ಮೂಡಿಬಂದಿವೆ. ಈ ತ್ರಿಪದಿಗಳು ಆಧುನಿಕ ವಚನ ಸಾಹಿತ್ಯದಲ್ಲಿ ನಿಖರವಾಗಿ ನೆಲೆ ನಿಲ್ಲಬಲ್ಲಂತಹ ಅದ್ಭುತವಾದ ಅನುಭವ ಹಾಗೂ ನೀತಿಯನ್ನು ತಿಳಿಸುವ ಸನ್ಮಾರ್ಗಕ್ಕೆ ಕೊಂಡೊಯ್ಯುವ ವಚನಗಳಾಗಿ ತೋರುತ್ತವೆ. ಸರ್ವಜ್ಞಮೂರ್ತಿಯಂತೆ ಸಹಜ ಹಾಗೂ ಜೀವನಪೂರ್ಣ, ನಿತ್ಯ ನೂತನ, ವಾಸ್ತವಿಕ ವಿಚಾರಗಳಿಂದ ಕೂಡಿದ ಪ್ರಜ್ಞೆ ಇವರ ವಚನಗಳಲ್ಲಿದೆ. ಶ್ರೀಯುತರು ಸತ್ಯಜ್ಞನ ವಚನಗಳು ಎಂಬ ಭಾಗ ೧ ಮತ್ತು ಭಾಗ ೨, ೩, ೪ ಎಂಬ ಸಂಕಲನಗಳನ್ನು ರಚಿಸಿದ್ದಾರೆ. ಇವರ ವಚನಗಳ ವಸ್ತು, ವಿಭಿನ್ನ ಹಾಗೂ ವೈವಿಧ್ಯತೆಯಿಂದ ಕೂಡಿದೆ. ಇವರು ಅನೇಕ ಭಾಗಗಳಾಗಿ ವಿಂಗಡಿಸಿದ್ದಾರೆ. ಅದರಲ್ಲಿ ವೈಯಕ್ತಿಕ, ಪ್ರಾದೇಶಿಕ, ಸಾಹಿತ್ಯ ಶಿಕ್ಷಣ ಸಾಮಾಜಿಕ ವಿಡಂಬನೆ, ಮೂಢನಂಬಿಕೆ, ವೈಜ್ಞಾನಿಕ, ಆರ್ಥಿಕ, ವೈದ್ಯಕೀಯ, ನೈತಿಕ ಧರ್ಮ ಚಿಂತನ ಮುಂತಾದ ವಿಷಯ ವಸ್ತುಗಳಿಂದೊಡಗೂಡಿದ ತ್ರಿಪದಿಗಳನ್ನು ಬಹು ಅರ್ಥಗರ್ಭಿತವಾಗಿ ರಚಿಸಿದ್ದಾರೆ.

## ಅಡಿ ಟಿಪ್ಪಣಿಗಳು

೧. ಸತ್ಯಜ್ಞನ ವಚನಗಳು ಭಾಗ-೧, ಸಿದ್ಧರಾಮ ಪೋಲೀಸ ಪಾಟೀಲ, ಪುಟ-೨೩-೧೯೮೦
೨. ಸತ್ಯಜ್ಞನ ವಚನಗಳು ಭಾಗ-೨, ಸಿದ್ಧರಾಮ ಪೋಲೀಸ ಪಾಟೀಲ, ಪುಟ-೪೧-೧೯೯೩
೩. ಸತ್ಯಜ್ಞನ ವಚನಗಳು ಭಾಗ-೩, ಸಿದ್ಧರಾಮ ಪೋಲೀಸ ಪಾಟೀಲ, ಪುಟ-೬೮-೨೦೦೦
೪. ಸತ್ಯಜ್ಞನ ವಚನಗಳು ಭಾಗ-೪, ಸಿದ್ಧರಾಮ ಪೋಲೀಸ ಪಾಟೀಲ, ಪುಟ-೫೩-೨೦೧೦